


■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

# ಆ ಮಾದಕ ರಾತ್ರಿ!

ಸುಗಂಧಾ ಮನೆ ಬದಲಾಯಿಸಿದಾಗ ಅಮ್ಮ ಬಂದರು. ಅವರಿಗೂ ಈ ಹೊಸ ಮನೆ ತುಂಬಾ ಇಷ್ಟವಾಯಿತು. 'ಮನೆ ಬದಲಾಯಿಸುವಾಗ ನೀನು ನನ್ನನ್ನು ಕರೆಯಬೇಕಿತ್ತು' ಎಂದು ಅವರು ದೂರಿದ್ದರು. ಏಕೆಂದರೆ ಅವರು ಆಗ ನನಗೆ ಸಹಾಯವನ್ನು ಮಾಡಬಹುದಿತ್ತು. ನಾನು ಅವರಿಗೆ ರಿತಿಕ್ ನನಗೆ ಸಹಾಯ ಮಾಡಿದ್ದ ಎಂದೆ. ರಿತಿಕ್ ಹೆಸರು ಕೇಳಿದೊಡನೆಯೇ ಅವರ ಹಣೆಯಲ್ಲಿ ಚಿಂತೆಯ ಗೆರೆಗಳು ಮೂಡಿದವು. ಆ ಕ್ಷಣ ನಾನು ಅವರಿಗೆ ಒಂದು ಚಿಕ್ಕ ಮಗುವಾದೆ, ಏಕೆಂದರೆ ಅವರು ಅಪರಿಚಿತರೊಂದಿಗೆ ಮಾತನಾಡಬಾರದು ಎಂದು ನನಗೆ ಉಪದೇಶ ಕೊಡಬಹುದಲ್ಲ!

'ಈ ರಿತಿಕ್ ಯಾರು? ನಿನ್ನ ಕಚೇರಿಯಲ್ಲಿದ್ದಾನಾ? ನಿನ್ನೊಂದಿಗೆ ಕೆಲಸ ಮಾಡ್ತಾನಾ?' ಅಮ್ಮ ಅಕಸ್ಮಾತ್ ಪೊಸೆಸೀವ್ ಆದರು. ಆದರೆ ಏಕೆ? ನಾನು ಆರೇಳು ವರ್ಷಗಳಿಂದ ಒಂಟಿಯಾಗಿದ್ದೇನೆ; ನನ್ನ ಒಳಿತು ಕೆಡುಕುಗಳನ್ನು ತಿಳಿಯಲು ಅರ್ಥಮಾಡಿಕೊಳ್ಳಲು ಇಷ್ಟು ವರ್ಷಗಳು ಸಾಕಾಗುತ್ತವೆ; ಅದುವರೆಗೆ ಕಡೇಪಕ್ಷ ನಾನಿದನ್ನೇ ತಿಳಿಯುತ್ತಿದ್ದೆ.

ಅಮ್ಮ ನನ್ನೊಂದಿಗೆ ಎರಡು ದಿನಗಳಿದ್ದರು. ಅವರು ತಮ್ಮದೇ ಆದ ರೀತಿಯಲ್ಲಿ ಮನೆಯ ವಸ್ತುಗಳನ್ನು ವ್ಯವಸ್ಥಿತವಾಗಿಟ್ಟರು. ಈ ನಡುವೆ ರಿತಿಕ್‌ನೊಂದಿಗೆ ಅವರ ಭೇಟಿಯಾಯಿತು. ಅಮ್ಮ ಬಂದಿರುವ ವಿಷಯ ರಿತಿಕ್‌ಗೆ ತಿಳಿದಾಗ ಅವನು ಮನೆಗೆ ಬರಲು ಹಿಂದುಮುಂದು ನೋಡಿದ. ಅಮ್ಮ ಅವನನ್ನು ಯಾವ ದೃಷ್ಟಿಯಿಂದ ನೋಡುವರೋ ಎಂದು ಅವನಿಗೆ ಅನ್ನಿಸಿತ್ತು. ಅಮ್ಮನಿಗೆ ಅವನು ಇಷ್ಟವಾಗದೆಯೂ ಇರಬಹುದು.

'ನಾನೀಗ ಅವರ ಎದುರಿಗೆ ಬರದಿರುವುದೇ ಲೇಸು' ರಿತಿಕ್ ಹೇಳಿದ್ದ.

'ಏಕೆ ಹೆದರ್ತೀಯ? ಅಮ್ಮ ನಿನ್ನನ್ನೇನು ಸಾಯಿಸಲ್ಲ' ನಾನು ನಕ್ಕು ಹೇಳಿದ್ದೆ.

'ಸರಿ, ಆದ್ರೆ ನೀನು ಆಮೇಲೆ ನನ್ನನ್ನು ದೂಷಿಸಬಾರದು.'

'ಆಗ್ಲಿ'.

ಅಮ್ಮನನ್ನು ಭೇಟಿಯಾಗಲು ರಿತಿಕ್ ಒಪ್ಪಿದ್ದ. ಇಬ್ಬರ ಭೇಟಿ ಉತ್ಸಾಹಪೂರ್ಣವೂ ಆಗಿರಲಿಲ್ಲ, ನಿರಾಸೆಯಿಂದಲೂ ಕೂಡಿರಲಿಲ್ಲ.

'ರಿತಿಕ್ ಬಗ್ಗೆ ನೀನು ಗಂಭೀರವಾಗಿದ್ದೀಯ?' ಅಮ್ಮ ಹೊರಡುವ ದಿನದ ಹಿಂದಿನ ರಾತ್ರಿ ಕೇಳಿದ್ದಳು.

'ಗಂಭೀರ ಅಂದ್ರೆ?' ನಾನು ಅಮ್ಮನ ಅಭಿಪ್ರಾಯವನ್ನು ಸ್ವಲ್ಪ ಅರ್ಥ ಮಾಡಿಕೊಂಡೆ, ಸ್ವಲ್ಪ ಅರ್ಥವಾಗಲಿಲ್ಲ. ನಾನು ಅವರ ಬಾಯಿಯಿಂದಲೇ ಅವರ ಅಭಿಪ್ರಾಯವನ್ನು ಕೇಳಲು ಬಯಸುತ್ತಿದ್ದೆ.

'ನೀನು ಅವನನ್ನು ಮದುವೆಯಾಗಬೇಕೆಂದು ಯೋಚಿಸುತ್ತಿದ್ದೀಯಲ್ಲ?' ಅಮ್ಮ ಕೇಳಿದ್ದರು.

